ಆ) ಎಂ. ಎಂ. ಎಲ್. ತಯಾರಿಸಿದ ಕಲ್ಲನ್ನು ಇಟಲಿ, ಜಪಾನ್, ಪಶ್ಚಿಮ ಜರ್ಮನಿ, ಟೈವಾನ್ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ರಫ್ತು ಮಾಡಲಾಗುತ್ತಿದೆ,

ಇ) ೧೯೭೯ ರಿಂದ ೧೯೮೭ರ ವರೆಗೆ ರೂ. ೭೦,೩೭,೧೬೬ ರಾಜಧನ ಸಂದಾಯವಾಗಿದೆ ಕೆಎಂಎಂಸಿಆರ್ ೧೯೬೯ರ ಮೇರೆಗೆ ನಿಗಧಿ ಪಡಿಸಿರುವಂತೆ ರಾಜಧನವನ್ನು ವಸೂಲಿ ಮಾಡಲಾಗುತ್ತಿದೆ.

ಈ) ಹೌದು.

ಉ) ಎಲ್ಲ ರೀತಿಯ ರಫ್ತುಗಳನ್ನು ವಿದೇಶಿ ವಿನಿಮಯದ ಸಲುವಾಗಿ ಉತ್ತೇಜಿಸುವುದು ಸರ್ಕಾರದ ಕಾರ್ಯ ನೀತಿಯಾಗಿರುತ್ತದೆ.

ರೇಷ್ಮೆ ಗೂಡಿನ ಮಾರ್ಕೆಟ್‌ಗಳು

೧೨೭೪(೨೪೫೧) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು, ಉತ್ತರಿಸುವರೇ:

ಅ) ಮೈಸೂರು, ಮಂಡ್ಯ, ತುಮಕೂರು, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿರುವ ಎಷ್ಟು ರೇಷ್ಮೆ ಗೂಡುಗಳ ಮಾರ್ಕೆಟ್ಟುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿರುವ ಸದರಿ ಮಾರುಕಟ್ಟೆಗಳಿಂದ ರಾಜ್ಯ ಬೊಕ್ಕಸಕ್ಕೆ ಬರುವ ಸರ್ಕಾರಕ್ಕೆ ಕಮಿಷನ್ ಹಣವೆಷ್ಟು?

ಇ) ಈ ವರ್ಷದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಾರ್ಕೆಟ್ಟುಗಳ ಸಂಖ್ಯೆ ಎಷ್ಟು?

ಈ) ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿರುವ ಗ್ರೈನೇಜ್, ತಾಂತ್ರಿಕ ಕೇಂದ್ರ, ಹಿಪ್ಪನೇರಳೆ ಫಾರಂ ಮತ್ತು ಜಾಕಿ ಕೇಂದ್ರಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಉ) ಈ ಸಾಲಿನಲ್ಲಿ ಹೊಸದಾಗಿ ನಿರ್ಮಿಸಲಾಗುವ ವಿವಿಧ ರೀತಿಯ ಕೇಂದ್ರಗಳ ಸಂಖ್ಯೆ ಎಷ್ಟು? ಈ ಕೇಂದ್ರಗಳ ನಿರ್ಮಾಣ ಯಾವಾಗ ಮಾಡಲಾಗುವುದು?

ಊ) ಮೈಸೂರು, ತುಮಕೂರು, ಬೆಂಗಳೂರು, ಮಂಡ್ಯ ಮತ್ತು ಕೋಲಾರ ಜಿಲ್ಲೆಯ ಜಾಕಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವವರ ನೌಕರರ ಸಂಖ್ಯೆ ಎಷ್ಟು?

ಋ) ಸದರಿ ನೌಕರರನ್ನು ಖಾಯಂ ಆಗಿ ಆದ್ಯತೆಯ ಮೇಲೆ ತೆಗೆದುಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಸಚಿವರು).—

ಅ) ಮೈಸೂರು, ಮಂಡ್ಯ, ತುಮಕೂರು, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ೩೩ ರೇಷ್ಮೆ ಗೂಡಿನ ಮಾರುಕಟ್ಟೆಗಳಿವೆ. ಜಿಲ್ಲಾವಾರು ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ಮೈಸೂರು	: ೮
ಮಂಡ್ಯ	: ೨
ತುಮಕೂರು	: ೬
ಬೆಂಗಳೂರು	: ೧೧
ಕೋಲಾರ	: ೬
ಒಟ್ಟು	೩೩

ಆ) ಸದರಿ ಮಾರುಕಟ್ಟೆಗಳಿಂದ ರಾಜ್ಯದ ಬೊಕ್ಕಸಕ್ಕೆ ತುಂಬಿ ಬರುವ ಮಾರುಕಟ್ಟೆ ಶುಲ್ಕದ ಹಣ ೧೯೮೭-೮೮ನೇ ಸಾಲಿನಲ್ಲಿ ೪೨೯ ಲಕ್ಷ ರೂ.ಗಳು ಜಿಲ್ಲಾವಾರು ವಿವರಗಳನ್ನು ಕೆಳಗೆ ಕೊಡಲಾಗಿದೆ.

ಮೈಸೂರು	೯೯.೨೭ ಲಕ್ಷ ರೂ.ಗಳು
ಮಂಡ್ಯ	೧.೭೪ ,,
ತುಮಕೂರು	೧೦.೪೨ ,,
ಬೆಂಗಳೂರು	೨೦೩.೪೫ ,,
ಕೋಲಾರ	೧೧೪.೦೩ ,,
ಒಟ್ಟು	೪೨೮.೯೧ ಲಕ್ಷ ರೂ.ಗಳು

೫) ಈ ವರ್ಷದಲ್ಲಿ ಹೊಸದಾಗಿ ಮಾರುಕಟ್ಟೆಗಳನ್ನು ತೆರೆಯುವ ಉದ್ದೇಶವಿರುವುದಿಲ್ಲ. ಕೋಲಾರ ಜಿಲ್ಲೆಯ ಚಿಂತಾಮಣಿ ಮತ್ತು ಬಿಜಾಪುರ ಜಿಲ್ಲೆಯ ಬಿಜಾಪುರದಲ್ಲಿರುವ ಮಾರುಕಟ್ಟೆಗಳಿಗೆ ಕಟ್ಟಡಗಳನ್ನು ನಿರ್ಮಿಸುವ ಉದ್ದೇಶವಿದೆ.

೬) ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿರುವ ಗ್ರೈನೇಜುಗಳು, ತಾಂತ್ರಿಕ ಸೇವಾ ಕೇಂದ್ರ, ಹಿಪ್ಪನೇರಳೆ ಕೃಷಿ ಕ್ಷೇತ್ರ (ಫಾರಂ) ಮತ್ತು ಚಾಕಿ ಸಾಕಾಣಿಕೆ ಕೇಂದ್ರಗಳ ಸಂಖ್ಯೆಗಳನ್ನು ಈ ಕೆಳಗೆ ಕೊಡಲಾಗಿದೆ.

	ಬೆಂಗಳೂರು ಜಿಲ್ಲೆ	ಕೋಲಾರ ಜಿಲ್ಲೆ
೧) ಗ್ರೈನೇಜುಗಳು (ಕೇಂದ್ರ ರೇಷ್ಮೆ ಮಂಡಳಿ ಮತ್ತು ಖಾಸಗಿ ಗ್ರೈನೇಜುಗಳು ಸೇರಿದಂತೆ)	೧೯೨	೧೫೮
೨) ತಾಂತ್ರಿಕ ಸೇವಾ ಕೇಂದ್ರಗಳು	೨೬	೧೯
೩) ಹಿಪ್ಪನೇರಳೆ ಕೃಷಿ ಕ್ಷೇತ್ರಗಳು (ಫಾರಂ)	೧೪	೯
೪) ಚಾಕಿ ಸಾಕಾಣಿಕೆ ಕೇಂದ್ರಗಳು	೩೧೮	೨೫೧

೮) ೧೯೮೮-೮೯ನೇ ಸಾಲಿನಲ್ಲಿ ಹೊಸದಾಗಿ ಯಾವ ಕೇಂದ್ರಗಳ ನಿರ್ಮಾಣವನ್ನು ಮಾಡುವ ಯೋಚನೆ ಸದ್ಯದಲ್ಲಿ ಇರುವುದಿಲ್ಲ.

೯) ಮೈಸೂರು, ತುಮಕೂರು, ಬೆಂಗಳೂರು, ಮಂಡ್ಯ ಮತ್ತು ಕೋಲಾರ ಜಿಲ್ಲೆಯ ಚಾಕಿ ಸಾಕಾಣಿಕೆ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರ ಸಂಖ್ಯೆ ೩೨೭೧.

ಜಿಲ್ಲಾವಾರು ವಿವರಗಳನ್ನು ಈ ಕೆಳಗೆ ಕೊಡಲಾಗಿದೆ:

ಮೈಸೂರು	೮೯೨
ಮಂಡ್ಯ	೫೨೨
ತುಮಕೂರು	೪೫೨
ಬೆಂಗಳೂರು	೭೪೫
ಕೋಲಾರ	೬೬೦
ಒಟ್ಟು	೩೨೭೧

೧೦) ಸದರಿ ೩೨೭೧ ಕೆಲಸಗಾರರಲ್ಲಿ ೫ ವರ್ಷಗಳ ಕಾಲ ನಿರಂತರ ಸೇವೆ ಸಲ್ಲಿಸಿರುವ ೪೯೧ ದಿನಗೂಲಿ ಕೆಲಸಗಾರರನ್ನು ಖಾಯಂ ಮಾಸಿಕ ವೇತನ ಸಿಬ್ಬಂದಿಯಾಗಿ ಪರಿವರ್ತಿಸಲಾಗಿದೆ. ಉಳಿದವರಲ್ಲಿ ೫ ವರ್ಷ ನಿರಂತರ ಸೇವೆ ಸಲ್ಲಿಸಿದ ಬಳಿಕ ಖಾಯಂ ಮಾಸಿಕ ವೇತನ ಸಿಬ್ಬಂದಿಯಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.